# ಎಲ್.ಐ.ಸಿ. ಎಂಪ್ಲಾಯೀಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.

**ಲಿಕೋಬ್ಯಾಂಕ್ ರೋಡ್, ಉಡುಪಿ – 576 101.**

## 2024–2025ನೇ ಸಾಲಿನ 63ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಸೂಚನಾ ಪತ್ರ

ಬ್ಯಾಂಕಿನ 63ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯು **ದಿನಾಂಕ 20–09–2025ರಂದು, ಶನಿವಾರ** ಪೂರ್ವಾಹ್ನ 11–30ಕ್ಕೆ ಸರಿಯಾಗಿ, **"ಲಿಕೋಬ್ಯಾಂಕು ವಜ್ರಮಹೋತ್ಸವ"** ಸಭಾಂಗಣದಲ್ಲಿ ಬ್ಯಾಂಕಿನ ಅಧ್ಯಕ್ಷ **ಶ್ರೀ ಕೆ. ಕೃಷ್ಣ** ಇವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಆಗಮಿಸಿ, ಸಭಾಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

**ವಿಷಯಗಳು:**

1. ಸ್ವಾಗತ
2. 63ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
3. 2023–2024ನೇ ಸಾಲಿನ ಸಾಮಾನ್ಯ ಸಭೆಯ ನಡವಳಿಯನ್ನು ಓದಿ ದೃಢೀಕರಿಸುವುದು.
4. 2024–2025ನೇ ಸಾಲಿನ ನಿರ್ದೇಶಕ ಮಂಡಳಿ ವರದಿಯನ್ನು ಅಂಗೀಕರಿಸುವುದು.
5. 2024–2025ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳನ್ನು ಮತ್ತು ವರದಿಯನ್ನು ಪರಿಗಣಿಸುವುದು ಮತ್ತು ಅಂಗೀಕರಿಸುವುದು.
6. 2024–2025ನೇ ಸಾಲಿನ ನಿವ್ವಳ ಲಾಭ ಹಂಚಿಕೆಯನ್ನು ಆಡಳಿತ ಮಂಡಳಿ ಸದಸ್ಯರು ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಅನುಮೋದಿಸುವುದು.
7. 2024–2025ನೇ ಸಾಲಿನ ಈ ಕೆಳಗಿನ ವೆಚ್ಚ ಮಂಜೂರಾದ ಮಿತಿಗಿಂತ ಹೆಚ್ಚಾಗಿರುವುದನ್ನು ಸ್ಥಿರೀಕರಿಸಿ ಮಂಜೂರಾತಿ ನೀಡುವುದು.
8. 2025–26ನೇ ಸಾಲಿಗೆ ಆಯ–ವ್ಯಯ ಪಟ್ಟಿಯನ್ನು ಘಟನೋತ್ತರ ಅನುಮೋದಿಸುವುದು
9. 2024–25ನೇ ಸಾಲಿನ ಶಾಸನಾತ್ಮಕ ಲೆಕ್ಕ ಪರಿಶೋಧನಾ ವರದಿಗೆ ಸಲ್ಲಿಸಿದ ಅನುಪಾಲನಾ ವರದಿಯ ಪರಿಶೀಲನೆ ಮತ್ತು ಅಂಗೀಕಾರ.
10. 2025–26ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕಾತಿಯನ್ನು ಘಟನೋತ್ತರ ಅನುಮೋದಿಸುವುದು ಹಾಗೂ ಸಂಭಾವನೆ ನಿಗದಿಪಡಿಸುವುದು.
11. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ ಮತ್ತು ಸುಸ್ತಿಯಾಗಿದ್ದಲ್ಲಿ ವಸೂಲಾತಿಗೆ ಕೈಗೊಂಡಿರುವ ಕ್ರಮ.
12. ಅಧ್ಯಕ್ಷರ ಅನುಮತಿ ಮೇರೆಗೆ ಬರುವ ಇತರೇ ವಿಷಯಗಳು
13. ವಂದನಾರ್ಪಣೆ.

**ಆಡಳಿತ ಮಂಡಳಿಯ ಆದೇಶದ ಮೇರೆಗೆ**

**ಸ್ಥಳ : ಉಡುಪಿ**
**ದಿನಾಂಕ : 01–08–2025**

**ಶಶಿಕಲಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ

ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಚರ್ಚಿಸಬಹುದಾದ ಇತರ ವಿಷಯಗಳೇನಾದರೂ ಇದ್ದಲ್ಲಿ ಅಥವಾ ಹೆಚ್ಚಿನ ವಿವರ ಬೇಕಾದಲ್ಲಿ ಉಪನಿಬಂಧನೆಯನುಸಾರ ಮಹಾಸಭೆಗೆ 5 ದಿವಸಗಳ ಮುಂಚಿತವಾಗಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಲಿಖಿತವಾಗಿ ತಿಳಿಸತಕ್ಕದ್ದು. ಅಧ್ಯಕ್ಷರ ಅನುಮತಿ ಮೇರೆಗೆ ಅಂತಹ ವಿಷಯಗಳನ್ನು ಚರ್ಚಿಸಲು ಅನುಮತಿ ಕೊಡಲಾಗುವುದು.

**(ಸಭೆಯ ದಿನ ಸದಸ್ಯರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ.)**